ಈ) ಈ ಆಸ್ಪತ್ರೆ ಎಲ್ಲಿ ನಡೆಯುತ್ತದೆ?

ಉ) ಪ್ರಾರಂಭದಿಂದ ಇಲ್ಲಿಯವರೆಗೆ ಎಷ್ಟು ಒಳ ಮತ್ತು ಹೊರ ರೋಗಿಗಳಿಗೆ ಪ್ರಕೃತಿ ಚಿಕಿತ್ಸೆ ಪದ್ಧತಿಯಿಂದ ಚಿಕಿತ್ಸೆ ನೀಡಲಾಗಿದೆ? (ವರ್ಷವಾರು ವಿವರ ನೀಡಬೇಕಾಗಿ ವಿನಂತಿ).

ಊ) ಈ ಆಸ್ಪತ್ರೆಯನ್ನು ಸುಸಜ್ಜಿತ ಆಸ್ಪತ್ರೆಯನ್ನಾಗಿ ಮಾಡಲು ಕೈಗೊಳ್ಳುವ ಕ್ರಮಗಳನ್ನು ವಿವರವಾಗಿ ತಿಳಿಯಬಹುದೇ?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ಪ್ರಕೃತಿ ಚಿಕಿತ್ಸಾ ಡಿಪ್ಲೊಮಾ ಕಾಲೇಜು ಸದ್ಯಕ್ಕೆ ಮೈಸೂರಿನ ಸರ್ಕಾರಿ ಭಾರತೀಯ ವೈದ್ಯಕೀಯ ಮಹಾವಿದ್ಯಾಲಯ ಕಟ್ಟಡದಲ್ಲಿ ನಡೆಯುತ್ತಿದ್ದು ಸದರಿ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಪ್ರಾರಂಭಿಸಲು ಪ್ರಾಥಮಿಕವಾಗಿ ಪ್ರತ್ಯೇಕವಾದ ಆಗತ್ಯ ಕಟ್ಟಡದ ಸೌಲಭ್ಯ ಬೋಧಕ ಸಿಬ್ಬಂದಿ ಇತ್ಯಾದಿ ಸೌಲಭ್ಯಗಳು ಬೇಕಾಗುತ್ತದೆ. ಅಲ್ಲದೆ ಯೋಜನೆಯಡಿಯಲ್ಲಿ ಆಗತ್ಯ ಹೆಚ್ಚಿನ ಆಯವ್ಯಯವು ಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಸದರಿ ಕಾಲೇಜನ್ನು ಪೂರ್ಣಪ್ರಮಾಣದ ಕಾಲೇಜನ್ನಾಗಿ ಪ್ರಾರಂಭಿಸಲು ಕ್ರಮ ಕೈಗೊಂಡಿರಲಿಲ್ಲ.

ಆ) ಈ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪರಿಶೀಲಿಸಲು ಉದ್ದೇಶಿಸಲಾಗಿದೆ. ಈ ಬಗ್ಗೆ ಪೂರ್ಣ ಪ್ರಮಾಣದ ಕಾಲೇಜನ್ನು ತೆರೆಯಲು ಬೇಕಾಗುವ ಪಠ್ಯಕ್ರಮದ ಮಾಹಿತಿಯನ್ನು ಈಗ ತಯಾರಿಸಲಾಗುತ್ತಿದೆ. ಇದು

ಮಂಜೂರಾದಲ್ಲಿ ಸದರಿ ಮಹಾವಿದ್ಯಾಲಯವನ್ನು 1992-93ನೇ ಆರ್ಥಿಕ ವರ್ಷದಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಇ) ಈ ಕಾಲೇಜಿಗೆ 5 ಹಾಸಿಗೆಗಳು, ಯೋಗ ಮತ್ತು ಪ್ರಕೃತಿ ಚಿಕಿತ್ಸೆಗಾಗಿ 6 ಹಾಸಿಗೆಗಳು ಒಟ್ಟು 11 ಹಾಸಿಗೆಗಳ ಆಸ್ಪತ್ರೆ ಇರುತ್ತದೆ. 5 ಹಾಸಿಗೆಗಳ ಯೋಗಾ ಆಸ್ಪತ್ರೆ 1979-80ರಲ್ಲಿ, 6 ಹಾಸಿಗೆಗಳ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ 1986-87ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ.

ಈ) ಈ ಆಸ್ಪತ್ರೆ ಮೈಸೂರಿನ ಸರ್ಕಾರಿ ಭಾರತೀಯ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಕಟ್ಟಡದಲ್ಲಿ ನಡೆಯುತ್ತಿದೆ.

ಉ)

ವರ್ಷ	ಹೊರರೋಗಿಗಳ ಚಿಕಿತ್ಸೆ	ಒಳರೋಗಿಗಳ ಚಿಕಿತ್ಸೆ
1988-89	2,986	22
1989-90	3,350	12
1990-91	3,536	13

ಊ) ಹಾಲಿ ಇರುವ ಪ್ರಕೃತಿ ಚಿಕಿತ್ಸಾ ಡಿಪ್ಲೊಮಾ ಕಾಲೇಜು ಪೂರ್ಣ ಪ್ರಮಾಣದ ಕಾಲೇಜಾಗಿ, ಪ್ರಾರಂಭವಾದ ನಂತರ, ವಿದ್ಯಾರ್ಥಿಗಳ ಸೇರ್ಪಡೆಗೆ ಸಂಬಂಧಿಸಿದಂತೆ ನಾರ್ಮ್ಸ್ ಪ್ರಕಾರ ಹಾಸಿಗೆಗಳನ್ನು ಹೆಚ್ಚಿಸುವುದು ಹಾಗೂ ವಿದ್ಯಾರ್ಥಿಗಳ ಭೋದನಾ ಕ್ರಮಕ್ಕೆ ಪ್ರಾಯೋಗಿಕವಾಗಿ ಅಭ್ಯಾಸ ಮಾಡಲು ಬೇಕಾಗುವ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಸಮಾಜ ಕಲ್ಯಾಣ ಇಲಾಖೆಯ 'ಸ'ದರ್ಜೆ ನೌಕರರ ಸಂಖ್ಯೆ.

3740 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹಾಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ 15 ವರ್ಷಕ್ಕಿಂತ ಮೇಲ್ಪಟ್ಟು ಸೇವೆ ಸಲ್ಲಿಸಿರುವ 'ಸಿ' ದರ್ಜಿಯ ನೌಕರರ ಸಂಖ್ಯೆ ಎಷ್ಟು?

ಆ) ಇವರಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಪ್ರಥಮ ದರ್ಜೆಯ ಸಹಾಯಕರಾಗಿ ಹಾಗೂ ಸಮಾಜ ಕಲ್ಯಾಣ ವಿಸ್ತರಣಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆ ಹಾಗೂ ವಿವರಗಳು ಎಷ್ಟು?

ಇ) ಈ ನೌಕರರಿಗೆ ಯಾವಾಗ ಮುಂಬಡ್ತಿ ನೀಡಲಾಗುವುದು.

ಈ) ಈ ಇಲಾಖೆಯಲ್ಲಿ 'ಸಿ' ದರ್ಜೆ ನೌಕರರಾದ ಪ್ರಥಮ ದರ್ಜೆ ಸಹಾಯಕರ ವೇತನಶ್ರೇಣಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಮಾಜ ಕಲ್ಯಾಣ ವಿಸ್ತರಣಾಧಿಕಾರಿಗಳ ಹುದ್ದೆಯನ್ನು ಕಛೇರಿ ಅಧೀಕ್ಷಕರ ಹುದ್ದೆಯ ವೇತನಶ್ರೇಣಿಗೆ ಮುಂಬಡ್ತಿಯನ್ನು ನೀಡುವ ಅವಕಾಶ ಏತಕ್ಕೆ ಮಾಡಿಕೊಡಬಾರದು.

ಉ) ಇದರಿಂದ ಸರ್ಕಾರಕ್ಕೆ ಆರ್ಥಿಕ ವೆಚ್ಚವಿಲ್ಲದೆ ಹೆಚ್ಚಿನ ಹುದ್ದೆಗಳನ್ನು ಸೃಷ್ಟಿಸದೇ 'ಸಿ' ದರ್ಜೆ ನೌಕರರಿಗೆ ಈ ಇಲಾಖೆಯಲ್ಲಿ ಮುಂಬಡ್ತಿ ಅವಕಾಶ ಮಾಡಿ ಕೊಡಬಹುದಲ್ಲವೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) 1088 •

ಆ) 1) ಎರಡನೇ ದರ್ಜೆ ಗುಮಾಸ್ತರು :

ಗುಮಾಸ್ತೆ ಹಾಗೂ ಬೆರಳಚ್ಚುಗಾರರು- 14

2) ಪ್ರಥಮ ದರ್ಜೆ ಗುಮಾಸ್ತರು :

ಸಮಾಜ ಕಲ್ಯಾಣ ವಿಸ್ತರಣಾಧಿಕಾರಿಗಳು -178

ಇ) ಅಂತಿಮ ಜೇಷ್ಠತಾ ಪಟ್ಟಿಯು ಪೂರ್ಣಗೊಂಡ ನಂತರ ಮುಂಬಡ್ತಿಯನ್ನು ಪರಿಶೀಲಿಸಲಾಗುವುದು.

ಈ) ವ್ಯಂದ ಮತ್ತು ನೇಮಕಾತಿಯಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ.

ಉ) ಆರ್ಥಿಕ ಹೊಣೆ ಇಲ್ಲದೆ ಉನ್ನತ ಹುದ್ದೆಗಳನ್ನು ಸೃಜಿಸದೆಯೇ ಮುಂಬಡ್ತಿ ನೀಡಲು ಸಾಧ್ಯವಿಲ್ಲ.

ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಖಾಯಂ.

3741 - ಶ್ರೀ ಸಿ.ಎಂ. ಲಿಂಗಪ್ಪ(ರಾಮನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಲಿ 35 ತಾಲ್ಲೂಕುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳನ್ನು ಖಾಯಂ ಮಾಡಲಾಗಿದೆಯೇ.

ಆ) ಇಲ್ಲದ ಪಕ್ಷದಲ್ಲಿ ಇವರನ್ನು ಯಾವಾಗ ಖಾಯಂ ಮಾಡಲಾಗುವುದು.

ಇ) ಖಾಯಂ ಮಾಡಲು ವಿಳಂಬವಾಗಲು ಕಾರಣಗಳೇನು?

ಈ) ಹಾಲಿ ಇವರಿಗೆ ನೀಡಿರುವ ಡೆಲಿಗೇಷನ್ ಆಫ್ ಪವರ್ಸ್‌ಗಳು ಯಾವುವು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ.

ಆ) ಹಾಲಿ ಇರುವ ವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಈ ಹುದ್ದೆಗಳನ್ನು ಕೆಪಿಎಸ್‌ಸಿಯಿಂದ ನಂತರ ಮತ್ತು ಹುದ್ದೆಗಳು ಸೃಜನೆಯಾದ 5 ವರ್ಷಗಳ ನಂತರ.